# Media Coverage on

# Blood Donation Campaign to mark the inauguration of National Service Scheme (NSS) Unit at Indian Institute of Technology Dharwad (IITDh)

## Rajasthan Patrika (Hindi Newspaper)

# आईआईटी धारवाड़ में एनएसएस इकाई के उद्घाटन पर रक्तदान




*एनएसएस इकाई का उद्घाटन करते निदेशक प्रो. पी. शेषु।*

**धारवाड़@पत्रिका.** भारतीय प्रौद्योगिकी संस्थान (आई.आई.टी.) धारवाड़ में एनएसएस इकाई के उद्घाटन के दौरान रक्तदान अभियान चलाया गया। इस दौरान कोरोना के मानकों का पालन करते हुए अधिकारियों व स्टाफ की उपस्थिति में एनएसएस इकाई का उद्घाटन आईआईटी धारवाड़ के निदेशक प्रो. पी. शेषु ने किया।

## 84 लोगों ने किया रक्तदान

इस अवसर पर धारवाड़ ब्लड बैंक संस्थान के सहयोग से रक्तदान अभियान चलाया गया। इस अवसर पर 84 रक्तदाताओं ने रक्तदान किया। भारतीय प्रौद्योगिकी संस्थान (आई आई टी) के निदेशक प्रो. पी शेषु ने इस अवसर पर रक्तदान करने वालों को प्रमाण पत्र वितरित किया।

ब्लड बैंक के चिकित्साधिकारी डॉ. प्रकाश केलगेरे ने विभिन्न नस्ल के पौधरोपण कर कार्यक्रम का शुभारंभ किया। इस अवसर पर प्रो. पी शेषु ने कहा कि विद्यार्थी व स्टाफ में मानवीयता के भाव जगाने में आईआईटी धारवाड़ के एनएसएस इकाई की ओर से समय समय पर शिविर चलाना चाहिए।

भारतीय प्रौद्योगिकी संस्थान की एन एस एस इकाई राष्ट्रीय सेवा योजना के लक्ष्य को हासिल करने की दिशा में अग्रसर है। ग्रामीण क्षेत्र में पर्यावरण की समस्या से जनता को अवगत करवाने के साथ साथ जागरूकता फैला रही है।

## Vijaya Karnataka (Kannada Newspaper)

ಡಾ. ಲಿಂಗರಾಜ ರಾಮಾಪುರ, ವಿದ್ಯಾಶ್ರೀ ಬಣ. ಇದ್ದರು.




ಧಾರವಾಡದ ಐಐಟಿಯಲ್ಲಿ ಎನ್‌ಎಸ್‌ಎಸ್ ಘಟಕವನ್ನು ಉದ್ಘಾಟಿಸಲಾಯಿತು. ಐಐಟಿ ನಿರ್ದೇಶಕ ಪ್ರೊ. ಪಿ. ಶೇಷು ಅವರು ಉದ್ಘಾಟಿಸಿದರು. ಈ ವೇಳೆ ಸಂಸ್ಥೆಯ ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.

## Kannada Prabha (Kannada Newspaper)

# ಧಾರವಾಡ ಐಐಟಿಯಲ್ಲಿ ರಕ್ತದಾನ ಶಿಬಿರ

• **ಕನ್ನಡಪ್ರಭ ವಾರ್ತೆ** ಧಾರವಾಡ

ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ತನ್ನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಉದ್ಘಾಟಿಸಿದ್ದು ಈ ನಿಮಿತ್ತ ಆಯೋಜಿಸಿದ್ದ ರಕ್ತದಾನ ಅಭಿಯಾನ ಯಶಸ್ವಿಯಾಯಿತು.

ಐಐಟಿ ಧಾರವಾಡ ನಿರ್ದೇಶಕ ಪ್ರೊ. ಪಿ. ಶೇಷು ಅಭಿಯಾನ ಉದ್ಘಾಟಿಸಿ ರಕ್ತದಾನಿಗಳಿಗೆ ಪ್ರಮಾಣ ಪತ್ರ ನೀಡಿ, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯಲ್ಲಿ ಮಾನವೀಯತೆಯ ನಿಸ್ವಾರ್ಥ ಸೇವೆಯ ಭಾವನೆಯನ್ನು ಮೂಡಿಸಲು ಐಐಟಿ ನಿರಂತರವಾಗಿ ಇಂತಹ ಶಿಬಿರಗಳನ್ನು ಆಯೋಜಿಸಲಿದೆ ಎಂದರು. ಐಐಟಿ ಎನ್‌ಎಸ್‌ಎಸ್ ಘಟಕವು ರಾಷ್ಟ್ರೀಯ ಸೇವಾ ಯೋಜನೆಯ ಗುರಿ ಮತ್ತು ಉದ್ದೇಶಗಳಿಗೆ ಬದ್ಧವಾಗಿದ್ದು, ಹುಬ್ಬಳ್ಳಿ-ಧಾರವಾಡ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪರಿಸರ ಸಮಸ್ಯೆಗಳ ಬಗ್ಗೆ ಜಾಗೃತಿ, ಸ್ವಚ್ಛತಾ ಅಭಿಯಾನಗಳು, ಸಾಕ್ಷರತಾ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸ್ಥಳೀಯ ಸಮುದಾಯದಲ್ಲಿ ಸಕಾರಾತ್ಮಕ ಪರಿಣಾಮ ಬೀರಲು ಘಟಕವು ಎದುರು ನೋಡುತ್ತಿದೆ ಎಂದು ತಿಳಿಸಿದರು. ಬ್ಲಡ್ ಬ್ಯಾಂಕ್ ವೈದ್ಯಾಧಿಕಾರಿ ಡಾ. ಪ್ರಕಾಶ ಕೆಳಗೇರಿ ಇದ್ದರು.

KP




ಧಾರವಾಡದ ಐಐಟಿಯಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ರಕ್ತದಾನಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.


ಕನ್ನಡಪ್ರಭ Thu, 10 February 2022
https://kpepaper.asianetnews.com/c/66156776

# Udaya Vani (Kannada Newspaper)



ಎನ್ನುವಾಗಲೇ ಕರ್ನಾಟಕದ ಬಿಜೆಪಿ ರಾಜ್ಯ ಸರ್ಕಾರವು ನ್ಯಾಯಾಲಯದ ತೀರ್ಪಿಗೆ ಎಂದು ಸಂಘಟನೆ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

## ಎನ್‌ಎಸ್‌ಎಸ್ ಘಟಕ ಉದ್ಘಾಟನೆ




**ಧಾರವಾಡ: ಐಐಟಿಯಲ್ಲಿ ಎನ್‌ಎಸ್‌ಎಸ್ ಘಟಕ ಉದ್ಘಾಟಿಸಲಾಯಿತು. ಐಐಟಿ ನಿರ್ದೇಶಕ ಪ್ರೊ|ಪಿ.ಶೇಷು ಸೇರಿದಂತೆ ಇತರರು ಇದ್ದರು.**

**ಧಾರವಾಡ:** ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ನಿಸ್ವಾರ್ಥ ಸೇವೆ ಮಾಡಲು ಎನ್‌ಎಸ್‌ಎಸ್ ಘಟಕ ಸಹಕಾರಿ ಆಗಿದ್ದು, ಈ ನಿಟ್ಟಿನಲ್ಲಿ ಐಐಟಿ ಕೂಡ ಹೆಚ್ಚು ಹೆಚ್ಚು ಶಿಬಿರ ಆಯೋಜಿಸುವ ಅಗತ್ಯವಿದೆ ಎಂದು ಧಾರವಾಡ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ )ನಿರ್ದೇಶಕ ಪ್ರೊ|ಪಿ.ಶೇಷು ಹೇಳಿದರು.

ಇಲ್ಲಿನ ವಾಲ್ಮಿ ಕಟ್ಟಡದಲ್ಲಿರುವ ಐಐಟಿಯಲ್ಲಿ ಎನ್‌ಎಸ್‌ಎಸ್ ಘಟಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಮಾತ್ರವಲ್ಲ ಸಿಬ್ಬಂದಿಯವರಲ್ಲೂ ನಿಸ್ವಾರ್ಥ ಸಮಾಜ ಸೇವೆ ಮಾಡುವ ಮನೋಭಾವ ಬೆಳೆಸುತ್ತದೆ.

ಐಐಟಿಯ ಎನ್‌ಎಸ್‌ಎಸ್ ಘಟಕವು ಸೇವೆಯ ಗುರಿ ಹೊಂದಿದ್ದು, ಧಾರವಾಡ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿನ ಸಮಸ್ಯೆಗಳಿಗೆ ಸ್ಪಂದಿಸಲು ಸಜ್ಜಾಗಿದೆ. ಸಾಮಾಜಿಕ ಸಮಸ್ಯೆಗಳ ಕುರಿತು ಜಾಗೃತಿ, ಅಭಿಯಾನ, ಸಾಕ್ಷರತೆ ಸೇರಿದಂತೆ ಎಲ್ಲಾ ಸಮುದಾಯದ ಕಾರ್ಯಗಳಲ್ಲೂ ಭಾಗಿಯಾಗಲಿದೆ. ಹೀಗಾಗಿ ಆಯೋಜಕರು ಎನ್‌ಎಸ್‌ಎಸ್‌ನ ಹೆಚ್ಚು ಶಿಬಿರಗಳನ್ನು ಆಯೋಜಿಸಬೇಕೆಂದರು.

ಇದೇ ವೇಳೆ ಧಾರವಾಡ ರಕ್ತನಿಧಿ ಸಂಸ್ಥೆಯಿಂದ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. 84 ಜನರು ರಕ್ತದಾನ ಮಾಡಿದರು. ರಕ್ತದಾನ ಮಾಡಿದವರಿಗೆ ಧಾರವಾಡ ರಕ್ತನಿಧಿ ಸಂಸ್ಥೆಯ ವೈದ್ಯಾಧಿಕಾರಿ ಡಾ|ಪ್ರಕಾಶ ಕೆಳಗೇರಿ ವಿವಿಧ ತಳಿಯ ಸಸಿ ನೀಡಿ ಅಭಿನಂದಿಸಿದರು.